# ದ್ರೋಪ್ದಿ ಪಾತ್ರದ ಮರು ಸೃಷ್ಟಿ

**ಅಮರಾವತಿ ವಿ.**
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ.

**Article Link: https://aksharasurya.com/2023/06/amaravathi-v/**

ಕನ್ನಡದ ಪ್ರಮುಖ ಬರಹಗಾರರಲ್ಲಿ ಡಾ. ಎಚ್. ಎಲ್ ಪುಷ್ಪಾ ರವರು ಒಬ್ಬರು. ಇವರು ಪ್ರಮುಖ ಸ್ತ್ರೀವಾದಿ ಚಿಂತಕಿ. ಡಾ. ಎಚ್. ಎಲ್. ಪುಷ್ಪ ರವರು ಹಲವಾರು ಕೃತಿಗಳನ್ನು, ನಾಟಕಗಳನ್ನು ರಚಿಸಿದ್ದು ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಇವರ ಕೃತಿಗಳಲ್ಲಿ 'ಅಮೃತಮತಿ ಸ್ವಗತ' ಕವನ ಸಂಕಲನ ಮುಖ್ಯವಾದುದು. ಇವರ ಮತ್ತೊಂದು ಕವನ ಸಂಕಲನ 'ಗಾಜುಗೋಳ'. ಇದರಲ್ಲಿ ಬರುವ ಪ್ರಮುಖ ಕವಿತೆ ಎಂದರೆ ದ್ರೋಪ್ದಿ ಹಾಗೂ ಹೆಜ್ಜೆಗಳು. ಮಹಾಶ್ವೇತಾ ದೇವಿಯವರ ಸ್ತನ ಕಥೆಗಳಲ್ಲಿ ಬರುವ ದ್ರೌಪದಿಯ ಪಾತ್ರದಿಂದ ಪ್ರೇರಿತರಾಗಿ ಈ ಕವಿತೆಯನ್ನು ರಚಿಸಿದ್ದಾರೆ. ಆಧುನಿಕ ಮಹಿಳಾ ಕವಿಯತ್ರಿಯರು ತಮ್ಮ ಸಾಹಿತ್ಯ ಕೃತಿಗಳಿಗೆ ಪುರಾಣ ಪಾತ್ರಗಳನ್ನೇ ವಸ್ತುಗಳನ್ನಾಗಿ ಹೆಚ್ಚು ಆಯ್ಕೆ ಮಾಡಿಕೊಳ್ಳುತ್ತಾರೆ, ಏಕೆಂದರೆ ಇದರಿಂದ ಸಂಪ್ರದಾಯವಾದಿಗಳು ಪುರಾಣ ಪಾತ್ರಗಳಿಗೆ ತೊಡಸಿದ ಮುಸುಕನ್ನು ತೆರವುಗೊಳಿಸಿ, ಅದರ ವಾಸ್ತವತೆಯನ್ನು ಹೇಳುವ ಮೂಲಕ ಪುರಾಣ ಪಾತ್ರಗಳನ್ನು ಮರುಕಥನೀಕರಣಕ್ಕೆ ಒಳಗು ಮಾಡುತ್ತಾರೆ. ಇಲ್ಲಿ ಪುರಾಣ ಪಾತ್ರಗಳಾದರು ಅವು ವರ್ತಮಾನದ ಪರಿಸ್ಥಿತಿಯನ್ನು ಬಿಂಬಿಸಿರುತ್ತವೆ. ಡಾ. ಎಚ್. ಎಲ್. ಪುಷ್ಪಾ ಅವರು ರಚಿಸಿದ ದ್ರೋಪ್ದಿ ಹಾಗೂ ಹೆಜ್ಜೆಗಳು ಇದೆ ಹಿನ್ನೆಲೆಯನ್ನು ಒಳಗೊಂಡಿದೆ.

ಮಹಾಶ್ವೇತಾ ದೇವಿಯವರು ಭಾರತದ ಪ್ರಮುಖ ಸ್ತ್ರೀವಾದಿ ಚಿಂತಕರು. ಇವರು ಬಂಗಾಳಿ ಭಾಷೆಯಲ್ಲಿ ನೂರಕ್ಕೂ ಅಧಿಕ ಕಾದಂಬರಿಗಳನ್ನು 20ಕ್ಕೂ ಅಧಿಕ ಕಥೆಗಳನ್ನು ರಚಿಸಿದ್ದಾರೆ. ಇವರು ಪ್ರಮುಖ ಬರಹಗಾರರು ಅಷ್ಟೇ ಅಲ್ಲದೆ ಸಾಮಾಜಿಕ ಕಾರ್ಯಕರ್ತರು ಆಗಿದ್ದರು. ಹಿಂದುಳಿದ ಬುಡಕಟ್ಟು ಜನರ, ಆದಿವಾಸಿಗಳ ಅಸ್ಪೃಶ್ಯರ ಪರವಾಗಿ ಅವರ ಹಕ್ಕುಗಳಿಗಾಗಿ ಹೋರಾಟ ನಡೆಸಿದಂತಹ ಧೀರ ಮಹಿಳೆ ಮಹಾಶ್ವೇತಾ ದೇವಿಯವರು. ಇವರ ಸಾಹಿತ್ಯ ಹೆಚ್ಚಾಗಿ ಬುಡಕಟ್ಟು

ಜನರ, ಸ್ತ್ರೀಯರ, ವೇಶ್ಯೆಯರ ನೋವು ಮತ್ತು ಜೀವನವನ್ನು ಆಧರಿಸಿರುತ್ತದೆ. ಇವರೇ ಹೇಳುವ ಹಾಗೆ ಇವರ ಕಥೆಗಳು ಕೇವಲ ಕಥೆಗಳಲ್ಲ ಅವು ದೇಶದ ಜನರ ಜೀವನದ ಕಥೆಗಳು. ಇವರು ಹಲವಾರು ಕಥೆಗಳನ್ನು ಬರೆದಿದ್ದು ಅದರಲ್ಲಿ ದೋಪ್ದಿ ಕಥೆ ಪ್ರಮುಖವಾಗಿದೆ. ಇವರ ಕಥೆಗಳನ್ನು ಗಾಯತ್ರಿ ಚಕ್ರವರ್ತಿ ಸ್ಪೀವಾಕ್ ರವರು ಬಂಗಾಳಿಯಿಂದ ಇಂಗ್ಲೀಷಿಗೆ ಅನುವಾದ ಮಾಡಿದ್ದಾರೆ. ಮಹಾ ಶ್ವೇತಾದೇವಿಯವರು ಪಶ್ಚಿಮ ಬಂಗಾಳ, ಬಿಹಾರ್, ಬಂಗಾಳಗಳಲ್ಲಿನ ದಲಿತರು, ಮಹಿಳೆಯರು, ವೇಶ್ಯೆಯರು ಮತ್ತು ಬುಡಕಟ್ಟು ಸಮುದಾಯಗಳ ಮೇಲೆ ಸರ್ವಾಧಿಕಾರಿ ಭೂ ಮಾಲೀಕರು, ಸರ್ಕಾರಿ ಅಧಿಕಾರಿಗಳು ನಡೆಸುವ ದಬ್ಬಾಳಿಕೆಯನ್ನು ತಮ್ಮ ಕಥೆಗಳ ಮೂಲಕ ಚಿತ್ರಿಸಿದ್ದಾರೆ. ಅಂತಹ ಒಂದು ಘಟನೆಯೇ ದೊಪ್ದಿ ಕಥೆ.

ದೋಪ್ದಿ ಮೇಝುನ್ ಒಬ್ಬ ಬುಡಕಟ್ಟು ಮಹಿಳೆ, ಈಕೆಯ ಗಂಡ ದುಲ್ನ ಮೇಝುನ್. ಇವರಿಬ್ಬರು ತಮ್ಮ ಜನಕ್ಕೆ ಅನ್ಯಾಯ ಮಾಡಿದವರ ವಿರುದ್ಧ ಹೋರಾಡುತ್ತಿದ್ದರು. 1971ರಲ್ಲಿ ಆಪರೇಷನ್ ಬಕುಲಿ ನಡೆಯುತ್ತದೆ. ಈ ಆಪರೇಷನ್ ಬಕುಲಿಯಲ್ಲಿ ಇವರೇ ಮುಖ್ಯ ಅಪರಾಧಿಗಳಾಗಿರುತ್ತಾರೆ. ಕಾರಣವೆಂದರೆ ಸುರ್ಜಾ ಸಾಹುವನ್ನು ಕೊಂದುಹಾಕಿ ಮೇಲು ಜಾತಿ ಅವರಿಂದ ಕೊಳವೆ ಬಾವಿಗಳನ್ನು ವಶಪಡಿಸಿಕೊಂಡು ರೈತಾಪಿ ವರ್ಗದ ಜನರಿಗೆ ನೀಡಿದ್ದರು. ಇವರನ್ನು ಹಿಡಿಯಲು ವಿಶೇಷ ದಳವೊಂದು ನೇಮಕವಾಗಿರುತ್ತದೆ. ಇವರು ಪಶ್ಚಿಮ ಬಂಗಾಳದ ಎಲ್ಲಾ ಸಂತಾಲರನ್ನು ನಿರ್ದಾಕ್ಷಿಣ್ಯವಾಗಿ ಕೊಂದು ಹಾಕುತ್ತಾರೆ. ಇದು ಭಾರತದಲ್ಲಿ ನಡೆಯುತ್ತಿರುವ ಜಾತಿ ಅಸಮಾನತೆಗೆ ಉತ್ತಮ ಉದಾಹರಣೆ ಎಂದು ಹೇಳಬಹುದು. ದೋಪ್ದಿ ಮತ್ತು ದುಲ್ನರನ್ನು ಹಿಡಿಯಲು ಝುರ್ಖಾನಿ ಅರಣ್ಯವನ್ನು ಸೈನ್ಯ ಪ್ರವೇಶಿಸುತ್ತದೆ. ದೋಪ್ದಿಯ ಗಂಡನಾದ ದುಲ್ನನನ್ನು ಸೈನ್ಯ ಕೊಂದು ಹಾಕುತ್ತದೆ, ದೋಪ್ದಿ ತಪ್ಪಿಸಿಕೊಳ್ಳುತ್ತಾಳೆ. ಅವಳನ್ನು ಹಿಡಿಯಲು ಶೋಧ ಮುಂದುವರೆಯುತ್ತದೆ. ದೋಪ್ದಿ ವೀರ ಮಹಿಳೆ ಅನಕ್ಷರಸ್ಥಳಾದರೂ ಬುದ್ಧಿವಂತಳಾಗಿದ್ದಳು. ತನ್ನ ಗೆಳತಿಗೆ ಹೇಳುವ ಮಾತಿನಲ್ಲಿ ಅವಳ ಧೈರ್ಯವನ್ನು ನಾವು ಮೆಚ್ಚಬಹುದು, "ಸೈನ್ಯ ನನ್ನನ್ನು ಹಿಡಿದರು ಅಂತಲೇ ಇಟ್ಕೋ, ಏನ್ ಮಾಡ್ತಾರೆ ನನ್ನನ್ನ ಆಕ್ರಮಿಸಿ ಹಿಡೀತಾರೆ ಹಿಡಿಲಿ ಬಿಡು" ಎಂದು ಹೇಳುವ ಅವಳ ಮಾತುಗಳಲ್ಲಿ ಅವಳ ಧೈರ್ಯ ಆತ್ಮಸ್ಥೈರ್ಯವನ್ನು ನಾವು ನೋಡಬಹುದು.

ಅಂತೂ ಒಂದು ದಿನ ಸಂಜೆ ದೊಪ್ದಿಯನ್ನು ಸೆರೆ ಹಿಡಿಯಲಾಯಿತು. ಆದರೆ ಅಲ್ಲಿರುವ ಸೇನಾ ನಾಯಕ ಬಹಳ ಕ್ರೂರಿ ಆಗಿದ್ದನು. ಅವನು ಸೈನಿಕರನ್ನು ಉದ್ದೇಶಿಸಿ ಹೇಳುವ ಮಾತುಗಳನ್ನು ನಾವು ನೋಡಬಹುದು, "ಅದೇನು ಮಾಡಬೇಕು ಸರಿಯಾಗಿ ಮಾಡ್ರೋ ಅವಳಿಗೆ" ಎಂದು ಅತ್ಯಾಚಾರಕ್ಕೆ ಕುಮ್ಮಕ್ಕು ನೀಡುತ್ತಾನೆ. ಒಂದು ದಿನ ರಾತ್ರಿ ಐದಾರು ಪೊಲೀಸರು ಅವಳ ಮೇಲೆ ಅತ್ಯಾಚಾರ ಮಾಡುತ್ತಾರೆ. ಇದು ಪ್ರಸ್ತುತ ಸಂದರ್ಭದಲ್ಲಿ ನಡೆಯುತ್ತಿರುವಂತಹ ವಿಚಾರವೂ ಹೌದು. ಸಮಾಜದ ರಕ್ಷಣೆಗೆ ಇರುವ ರಕ್ಷಕರೇ ಭಕ್ಷಕರಾಗುವ ಪರಿಸ್ಥಿತಿಯನ್ನು ನಾವಿಲ್ಲಿ ಕಾಣಬಹುದು. ದೊಪ್ದಿ ಮೇಲೆ ಸೈನಿಕರು ಗುಂಪಾಗಿ ಅತ್ಯಾಚಾರ ಮಾಡುತ್ತಾರೆ. ಅವಳ ಕೈಕಾಲುಗಳನ್ನು ಎಳೆದು ಕಟ್ಟಿ ಹಾಕುತ್ತಾರೆ, ಸೊಂಟದ ಕೆಳಗಡೆ ಸುತ್ತಿದ ಬಟ್ಟೆ ಇರುವುದಿಲ್ಲ, ಅವಳ ಗುಪ್ತಾಂಗದಿಂದ ರಕ್ತ ಹರಿಯುತ್ತಿರುತ್ತದೆ. ಹಸಿ ಮಾಂಸವನ್ನು ತಿನ್ನುವ ಹದ್ದುಗಳಂತೆ ಅವಳ ಮೇಲೆ ಪೊಲೀಸರು ಅತ್ಯಾಚಾರ ಮಾಡಿರುತ್ತಾರೆ. ನಂತರ ದೋಪ್ದಿಯನ್ನು ಸೇನಾ ನಾಯಕರ ಬಳಿ ಕರೆದುಕೊಂಡು ಹೋಗುತ್ತಾರೆ. ಆದರೂ ದೋಪ್ದಿ ತನ್ನ ಮನಸ್ಥೈರ್ಯವನ್ನು ಕಳೆದುಕೊಂಡಿರುವುದಿಲ್ಲ. ಮುಂದೆ ಬಂದು ಹೇಳುವ ಅವಳ ಮಾತು ಎಂತಹವರನ್ನು ಬೆರಗಾಗಿಸುತ್ತದೆ. “ಸೇನಾ ನಾಯಕನ ಮುಂದೆ ಬಂದು, ಎರಡು ಕೈಗಳನ್ನು ತನ್ನ ಸೊಂಟದ ಮೇಲೆ ಊರಿ ನಿಂತು, ದೋಪ್ದಿ ಮೇಝುನ್ ಅನ್ನು ಹುಡುಕಿದ್ದು ಇದಕ್ಕಲ್ಲವೇ? ಸರಿಯಾಗಿ ಮಾಡ್ರೋ ಅಂತ ಅವರಿಗೆಲ್ಲ ಹೇಳಿದೆಯಲ್ಲ, ಹೇಗೆ ಮಾಡಿದ್ದಾರೆ ಅಂತ ನೋಡಲ್ಲವೇನು?” ಎಂದು ಪ್ರಶ್ನಿಸಿದಳು. ಸೇನಾ ನಾಯಕ ಆಗಲೇ ಕಂಗಾಲಾಗಿದ್ದ ದೋಪ್ದಿ ಬಟ್ಟೆಯನ್ನು ಹಾಕಿಕೊಳ್ಳಲು ನಿರಾಕರಿಸಿದಳು “ಏನು ಮಾಡ್ತೀಯಾ ಬಟ್ಟೆ ತಗೊಂಡು ನನ್ನನ್ನು ಬೆತ್ತಲು ಮಾಡಬಹುದು ಮತ್ತೆ ಬಟ್ಟೆ ತೊಡಿಸಿ ನೋಡೋಣ, ಲೋ ನೀನೊಬ್ಬ ಗಂಡಸೇನೋ?” ಎನ್ನುತ್ತಾ ಬಾಯಲ್ಲಿದ್ದ ರಕ್ತದ ಉಗುಳನ್ನು ಸೇನಾ ನಾಯಕನ ಬಿಳಿ ಶರ್ಟಿನ ಮೇಲೆ ಉಗಿದು, “ನಾನು ನಾಚಿಕೆ ಪಟ್ಟುಕೊಳ್ಳಬೇಕಾದ ಯೋಗ್ಯತೆಯನ್ನುಳ್ಳ ಒಬ್ಬ ಗಂಡಸು ಇಲ್ಲಿಲ್ಲ” ಎಂದು ಸೇನಾ ನಾಯಕನನ್ನು ದೂಡಿದಳು. ನಿಶಸ್ತ್ರ ಎದುರಾಳಿಯ ದಾಳಿಯ ಮುಂದೆ ನಿಲ್ಲಲು ಸಾಧ್ಯವಾಗದೆ ಸೇನಾನಾಯಕ ತತ್ತರಿಸಿ ನಡುಗಿದ. ಇದು ಮಹಾಶ್ವೇತಾ ದೇವಿ ಅವರ ದೋಪ್ದಿ ಕತೆ.

ದೊಪ್ದಿ ಎಂದರೆ ಸಂಸ್ಕೃತ ಭಾಷೆಯಲ್ಲಿನ ದ್ರೌಪದಿ. ಆಡು ಭಾಷೆಯಲ್ಲಿ ದೋಪ್ದಿ ಎಂದು ಕರೆಯುತ್ತಾರೆ. ಮಹಾಭಾರತದ ಪ್ರಮುಖ ಸ್ತ್ರೀವಾದಿ ಎಂದೇ ಕರೆಯಲ್ಪಡುವ ದ್ರೌಪದಿಯನ್ನು ಮಹಾಶ್ವೇತಾದೇವಿಯವರು ಒಬ್ಬ ಬುಡಕಟ್ಟು ಮಹಿಳೆಯಾಗಿ ಚಿತ್ರಿಸಿದ್ದಾರೆ. ಇದರ ಮೂಲಕ ಮಹಾಶ್ವೇತಾ ದೇವಿಯವರು ಮಾತನಾಡದ ಅನೇಕ ದೃಷ್ಟಿಕೋನಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ದ್ರೌಪದಿ ಪಂಚವಲ್ಲಬೆ. ಪುರುಷನ ಸಂಪ್ರದಾಯ ನಿಯಮಗಳಿಂದ ಶೋಷಣೆಯನ್ನು ಅನುಭವಿಸಿದವಳು. ಇಬ್ಬರು ಪುರುಷರ ದ್ವೇಷದಲ್ಲಿ ಬಲಿಪಶುವಾದವಳು ದ್ರೌಪದಿ. ಯಾವುದೇ ಯುದ್ಧಗಳು ನಡೆದಾಗ ಆ ಯುದ್ಧದಲ್ಲಿ ಪುರುಷರು ಆಕ್ರಮಣ ಮಾಡುವುದು ಹೆಣ್ಣಿನ ದೇಹವೇ ಆಗಿರುತ್ತದೆ. ಇದನ್ನು ಈ ಕಥೆಯಲ್ಲಿ ದೋಪ್ದಿ ಮುಖಾಂತರ ಮಹಾಶ್ವೇತದೇವಿಯವರು ವಿವರಿಸಿದ್ದಾರೆ. ಆದ್ದರಿಂದಲೇ ಮಹಾಭಾರತದಲ್ಲಿ ದ್ರೌಪದಿ ವಸ್ತ್ರಾಪರಣವ ನಡೆಯುತ್ತದೆ. ದ್ರೌಪದಿಯು ಸಭೆಯಲ್ಲಿ ತನ್ನ ಐದು ಜನ ಗಂಡಂದಿರನ್ನು ನಿಂದಿಸುತ್ತಾಳೆ. ತನ್ನನ್ನು ರಕ್ಷಿಸಲು ಆ ಸಭೇಲಿ ನೆರೆದಿರುವ ತನ್ನ ಗಂಡಂದಿರಾದ ಪಾಂಡವರಾಗಲಿ, ಭೀಷ್ಮನಾಗಲಿ, ದ್ರೋಣನಾಗಲಿ ಯಾರೂ ಬರುವುದಿಲ್ಲ. ಆಕೆ ಒಬ್ಬಂಟಿಯಾಗಿ ಹೋರಾಡುತ್ತಾಳೆ. ಇದು ಪುರಾಣವಾದರೂ ಪ್ರಸ್ತುತ ವರ್ತಮಾನವನ್ನು ಹೇಳುವ ಸಂಗತಿಯಾಗಿದೆ. ಈ ಕಥೆಯ ದೋಪ್ದಿಯ ಸ್ಥಿತಿಯು ಅದೇ. ದೋಪ್ದಿಯನ್ನು ಸೆರೆಹಿಡಿದಾಗ ಅವಳನ್ನು ರಕ್ಷಿಸಲು ಯಾರು ಬರುವುದಿಲ್ಲ. ಇಲ್ಲಿ ಎಚ್. ಎಲ್. ಪುಷ್ಪರವರ ಕವನದ ಸಾಲುಗಳನ್ನು ಗಮನಿಸಬಹುದು. "ದ್ರೌಪದಿ, ದೋಪ್ದಿಯಾದರೇನು? ಸೆಳೆವ ಸೀರೆಯ ತುಣುಕುಗಳಿಲ್ಲ, ದ್ರೋಣನಿಲ್ಲ, ಭೀಷ್ಮನಿಲ್ಲ, ಬೆನ್ನಬದಿ ನಿಲ್ಲುವ ಭೀಮನಿಲ್ಲ". ಈ ಸಾಲುಗಳು ದೋಪ್ದಿ ಸ್ಥಿತಿಯನ್ನು ಹೇಳುತ್ತಿವೆ. ದೋಪ್ದಿಯ ಮೇಲೆ ಸೈನಿಕರು ಅತ್ಯಂತ ಕ್ರೂರಿಗಳಾಗಿ ಅತ್ಯಾಚಾರವನ್ನು ಮಾಡಿ ಅವಳ ಮೈ ಮೇಲೆ ಒಂದು ಬಟ್ಟೆಯ ತುಂಡನ್ನು ಇರಿಸದೆ ಬೆತ್ತಲೆಗೊಳಿಸಿರುತ್ತಾರೆ. ಇಲ್ಲಿ ದ್ರೌಪದಿ ಮತ್ತು ದೊಪ್ದಿಯದು ಹೆಚ್ಚು ಕಡಿಮೆ ಒಂದೇ ಪರಿಸ್ಥಿತಿ, ದ್ರೌಪದಿಯ ವಸ್ತ್ರಾಪಹರಣದ ಸಂದರ್ಭದಲ್ಲಿ ತಮ್ಮ ಗಂಡಂದಿರು ತಮಗೆ ರಕ್ಷಣೆಯನ್ನು ನೀಡದಿರುದನ್ನು ಗಮನಿಸಿದರೆ ಪುರುಷ ಪ್ರಧಾನ ಸಮಾಜದಲ್ಲಿ ಪುರುಷರೇ ಅಸಹಾಯಕರಂತೆ ಅನ್ಯಾಯದ ವಿರುದ್ಧ ದನಿಯತ್ತದೆ ಹೆಣ್ಣನ್ನು ಮತ್ತಷ್ಟು ಶೋಷಣೆಗೆ ಒಳಗು ಮಾಡುತ್ತಿದ್ದಾರೆ. ಪ್ರಸ್ತುತ ಸಮಾಜದಲ್ಲಿ ನಾವು ದಿನನಿತ್ಯ ಪೇಪರ್, ಟಿವಿಗಳಲ್ಲಿ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆಯುತ್ತಿರುವುದನ್ನು ಕೇಳುತ್ತಿದ್ದೇವೆ. ಆದರೆ ಇದರ

ವಿರುದ್ಧ ಯಾರು ಧ್ವನಿ ಎತ್ತುವುದಿಲ್ಲ. ತಮ್ಮ ಮನೆ ಹೆಣ್ಣು ಮಕ್ಕಳು ಅಲ್ಲವೆಂದು ಇದರ ಬಗ್ಗೆ ತತ್ಸಾರ ಮನೋಭಾವನೆಯನ್ನು ತೋರಿಸುತ್ತಾರೆ.

ಡಾ. ಎಚ್. ಎಲ್. ಪುಷ್ಪಾ ಅವರು ದ್ರೌಪದಿ ಹಾಗೂ ಹೆಜ್ಜೆಗಳು ಎಂಬ ಕವಿತೆಯಲ್ಲಿ ಪುರುಷ ಪ್ರಧಾನ ಸಮಾಜವು ಹೆಣ್ಣನ್ನು ಯಾವ ರೀತಿ ನಡೆಸಿಕೊಳ್ಳುತ್ತದೆ ಎಂಬುದರ ಬಗ್ಗೆ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಅವರ ಕವಿತೆಯ ಸಾಲುಗಳನ್ನು ನೋಡುವುದಾದರೆ.

ಮದುರೆ ಕಣ್ಣುಗಳಲ್ಲಿ ಕುಣಿವ ಮಾಂಸದ ಮುದ್ದೆ
ಗಂಡಸೆಂಬ ಲಾಟಿ ಬೂಟು ಮೈಮೇಲೆ
ಹರಿದಾಡುವ ಕೆಂಜುಗಳು ಕಚ್ಚುತ್ತಲಿವೇ
ಕಚ್ಚಬಾರದ ಸಂದುಗೊಂದುಗಳಲ್ಲಿ
ಹೆಣ್ಣೆಂದರೇನು ಮೋಜು ಸುಲಭವಾಗಿ ತಿನ್ನುವ ತಿಂಡಿ
ಹರಿದು ತಿಂದರೂ ಒಬ್ಬೊಬ್ಬರು
ಅವರ ಅಮ್ಮ ಅಕ್ಕ ತಂಗಿಯರನ್ನು ಕಾಣದ ಇನ್ನೊಬ್ಬರು

ಸಮಾಜವು ಹೆಣ್ಣನ್ನು ಕೇವಲ ಭೋಗಿಸುವ ವಸ್ತು ಎಂದು ಭಾವಿಸಿದೆಯೇ ಹೊರತು ಅವಳಿಗೆ ಅವಳದೇ ಆದ ಅಸ್ತಿತ್ವವಿದೆ, ಅವಳು ಮನುಷ್ಯಳು ಎನ್ನುವ ಮಾನವೀಯ ನೆಲೆಯನ್ನು ಸಮಾಜ ಮರೆತು ಹೆಣ್ಣನ್ನು ದೈಹಿಕವಾಗಿ ಮತ್ತೆ ಮಾನಸಿಕವಾಗಿ ಶೋಷಿಸುತ್ತಿದೆ. ಈ ಪದ್ಯದಲ್ಲಿ ದ್ರೌಪದಿಯ ಮೂಲಕ ಅಂತಹ ಹಲವಾರು ಹೆಣ್ಣು ಮಕ್ಕಳ ರೋಧನೆಯನ್ನು ಚಿತ್ರಿಸಿದ್ದಾರೆ. ಇಲ್ಲಿ ದ್ರೌಪದಿ ಇಂದಿನ ದ್ರೌಪದಿ ಆಗಿದ್ದಾಳೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಜೈವಿಕವಾಗಿರುವುದೇ ಪಾಪ ಮತ್ತು ಅಪಾಯಕಾರಿ ಎಂಬಂತೆ ಗಂಡುಗಳೇ ನಿರೂಪಿಸಿದ್ದಾರೆ. ಹೆಣ್ಣು ಬಾರಿ ಹೆಣ್ಣಾಗಿರುವುದಿಲ್ಲ ಎಂದು ಅವರೇ ಹೇಳುತ್ತಾ ಬಂದಿದ್ದಾರೆ. ಅವಳು ಯಾರೋ ಒಬ್ಬರಿಗೆ ಅಕ್ಕಳೋ, ತಂಗಿಯ, ಅಮ್ಮನು ಹಾಗೆ ಇರುತ್ತಾಳೆ ಎನ್ನುತ್ತಾರೆ. ಆದರೆ ಆಕೆಯನ್ನು ತಾವೇ ಬತ್ತಲು ಗೊಳಿಸಿ ಅತ್ಯಾಚಾರ ಮಾಡುತ್ತಾರೆ. ಆಗ ಅವರಿಗೆ ತಮ್ಮವರ ನೆನಪಿಗೆ ಬರುವುದಿಲ್ಲ. ಹೆಣ್ಣಿನ ಬಗ್ಗೆ ಗಂಡು ತಳೆದಿರುವ ನಿಯಮಗಳು ಹೆಣ್ಣಿನ ಶೋಷಣೆಗೆ ಕಾರಣವಾಗುತ್ತಿವೆ ಎನ್ನುವುದನ್ನು ಈ ಕವಿತೆಯ ಮೂಲಕ ತಿಳಿಯಬಹುದು.

ದ್ರೌಪದಿ ಅತ್ಯಂತ ಧೀರ ಮಹಿಳೆ ಮತ್ತು ಬಲವಾದ ಮನಸ್ಸಿನವಳು. ಅತ್ಯಾಚಾರ ಮತ್ತು ಲೈಂಗಿಕ ನಿಂದನೆಗೆ ಸಂಬಂಧಿಸಿದ ಅವಮಾನವನ್ನು

ಧಿಕ್ಕರಿಸಿದಳು. ಈ ರೀತಿಯ ಪ್ರತಿಭಟನೆ ಭಾರತಕ್ಕೆ ಇದು ಅತ್ಯಂತ ಪ್ರಸ್ತುತವಾಗಿದೆ. ಅದರಲ್ಲೂ ಶೋಷಣೆಗೆ ಒಳಗಾದ ಮಹಿಳೆಯರು ಭಾರತದಲ್ಲಿ ಅನುಮೋದನೆಗೊಂಡ ಸಾಮಾಜಿಕ ಚಳುವಳಿಯಾದ meetoo ಮುಖಾಂತರ ಹಲವಾರು ಶೋಷಿತ ಹೆಣ್ಣುಗಳ ಧ್ವನಿಗಳು ಏದ್ದವು. ಇದು ದೋಪ್ದಿಯ ಪಾತ್ರದ ಆಶಯವಾಗಿದೆ ಎನ್ನಬಹುದು. "ಬಟ್ಟೆಯನ್ನು ಹಾಕಿಕೊಳ್ಳಲು ನಿರಾಕರಿಸಿ, ಬಟ್ಟೆಯನ್ನು ತಗೊಂಡು ಏನು ಮಾಡ್ತೀಯಾ? ನನ್ನನ್ನು ಬೆತ್ತಲೆ ಮಾಡಬಹುದು, ಆದರೆ ಬಟ್ಟೆ ತೊಡಿಸಿ ನೋಡೋಣ" ಎನ್ನುವ ಅವಳ ಮಾತುಗಳಲ್ಲಿ ಆತ್ಮಸ್ಥೈರ್ಯ ಮತ್ತು ತನ್ನ ದೇಹ ಚಿತ್ರಹಿಂಸೆಗೆ ಒಳಗಾಗಿದ್ದರು, ಅವಳು ಆ ದೇಹವನ್ನು ಆಯುಧವನ್ನಾಗಿ ಮಾಡಿಕೊಂಡು, ದೈಹಿಕವಾಗಿ ಕಿರುಕುಳಕ್ಕೆ ಒಳಗಾಗಿದ್ದರೂ, ಭಾವನಾತ್ಮಕವಾಗಿ ಗಾಯಗೊಳ್ಳದೆ ಅವರನ್ನು ಪ್ರತಿಭಟಿಸುತ್ತಾಳೆ. ಪುರುಷ ಪ್ರಧಾನ ಸಮಾಜ ಹೆಣ್ಣನ್ನು ಬರೀ ದೇಹವೆಂದೆ ತಿಳಿದಿದೆ, ಆದರೂ ಹೆಣ್ಣು ಬರೆ ದೇಹವಲ್ಲ ಅದನ್ನು ಮೀರಿದ ಅಸ್ತಿತ್ವ ಅವಳಿಗೆ ಇದೇ ಎನ್ನುವುದನ್ನು ನಾವು ದೋಪ್ದಿ ಪಾತ್ರದ ಮುಖಾಂತರ ನೋಡಬಹುದು. ಸೇನಾ ನಾಯಕನ ಮುಂದೆ ನಿಂತು ಹೇಳುತ್ತಾಳೆ "ನಾನು ನಾಚಿಕೆ ಪಟ್ಟುಕೊಳ್ಳಬೇಕಾದ ಒಬ್ಬ ಗಂಡಸು ಇಲ್ಲಿ ಇಲ್ಲ". ಇಲ್ಲಿ ಸಮಾಜದಲ್ಲಿ ಹೆಣ್ಣನ್ನು ಗೌರವಿಸುವ ಅವಳಿಗೆ ಸ್ವತಂತ್ರ್ಯವನ್ನು ನೀಡುವ, ಅವಳನ್ನು ಒಬ್ಬ ಮನುಷ್ಯಳನ್ನಾಗಿ ನೋಡುವ ಗಂಡಸಿಗೆ ಅವಳು ನಾಚುತ್ತಾಳೆ. ಆದರೆ ಹೆಣ್ಣನ್ನು ಅವರ ಕಾಮಕ್ಕೆ ಬಲುಪಶುಗಳನ್ನಾಗಿ ಮಾಡುವ ಗಂಡಿನ ಕುಲಕ್ಕೆ ಅವಳು ಧಿಕ್ಕಾರವನ್ನು ಹಾಕುತ್ತಿರುವುದು ಇಲ್ಲಿ ದ್ವನಿಸುತ್ತದೆ.

ಎಚ್. ಎಲ್. ಪುಷ್ಪ ಅವರ ಕವಿತೆಯ ಸಾಲುಗಳನ್ನು ಇಲ್ಲಿ ಗಮನಿಸಬಹುದು. ಇವರು ಹೆಣ್ಣಿನ ಅಂತರಂಗದ ಧ್ವನಿಯನ್ನು ಇಲ್ಲಿ ಪ್ರಸ್ತಾಪಿಸುತ್ತಾರೆ "ನಾನು ತಾಯಿ, ನಾನು ಪ್ರಕೃತಿ, ನಾನು ಹೆಣ್ಣು, ಬಿಚ್ಚುವುದು ಹರಿದೊಗಿಯುವುದು ಬಲು ಸುಲಭ ತೊಡಿಸುವವರಿದ್ದರೆ ಬನ್ನಿ ತೊಡುಗೆ ಈ ಹರಿದ ಮೈಯಿಗೆ ಒಡೆದ ಕನಸುಗಳಿಗೆ" ಎನ್ನುವ ಈ ಸಾಲಿನಲ್ಲಿ ಬಟ್ಟೆಯು ಒಂದು ಹೆಣ್ಣಿನ ಅಸ್ತಿತ್ವ ಮತ್ತು ಅವಳ ಸ್ವಾತಂತ್ರ ಅಂತರಂಗವನ್ನು ಪ್ರತಿನಿಧಿಸುತ್ತದೆ. ಒಬ್ಬ ಹೆಣ್ಣು ತನ್ನ ಜೀವನದ ಬಗ್ಗೆ ಹಲವಾರು ಕನಸುಗಳನ್ನು ಹೊತ್ತು ಕೊಂಡಿರುತ್ತಾಳೆ. ಆದರೆ ಪುರುಷಪ್ರಧಾನ ಸಮಾಜದ ನಿಯಮಗಳು ಗಂಡಿನ ಆಕ್ರಮಣಗಳು ಹೆಣ್ಣಿನ ಕನಸುಗಳು ಹೊಡೆಯುವಂತೆ ಮಾಡುತ್ತವೆ. ಮತ್ತೆ ಅವುಗಳನ್ನು ಕಟ್ಟಲು ಸಾಧ್ಯವಾಗದ ರೀತಿಯಲ್ಲಿ ಹೆಣ್ಣನ್ನು ಶೋಷಣೆಗೆ ಒಳಪಡಿಸಿರುವುದು ಇಲ್ಲಿ ವ್ಯಕ್ತವಾಗುತ್ತದೆ.

ದೋಪ್ದಿ ಪಾತ್ರದ ಮುಖಾಂತರ ಪುಷ್ಪರವರು ಸಾಂಪ್ರದಾಯಿಕ ಲೈಂಗಿಕ ನಿಯಮಗಳನ್ನು ಉಲ್ಲಂಘಿಸುವ, ದೇಹದ ಮೇಲಿನ ಅತ್ಯಾಚಾರವನ್ನು ಧಿಕ್ಕರಿಸಿ ಅವಳು ಮುನ್ನಡೆಯುವ ವಿಧಾನವನ್ನು ತಿಳಿಸಿದ್ದಾರೆ. ಪ್ರತಿಯೊಂದು ಹೆಣ್ಣು ತನಗಾಗುತ್ತಿರುವ ಅನ್ಯಾಯವನ್ನು ಧೈರ್ಯವಾಗಿ ಎದುರಿಸಬೇಕು ಜೀವನದಲ್ಲಿ ಮತ್ತೊಂದು ಹೆಜ್ಜೆಯನ್ನು ಸೃಷ್ಟಿಸಬೇಕು ಎನ್ನುವ ಆಶಯವನ್ನು ದೋಪ್ದಿಯ ಪಾತ್ರದ ಮುಖಾಂತರ ಇಡೀ ಹೆಣ್ಣು ಕುಲಕ್ಕೆ ಸಂದೇಶವನ್ನು ನೀಡಿದ್ದಾರೆ.

**ಪರಾಮರ್ಶನ ಗ್ರಂಥಗಳು**

1. ಸ್ತನ ಕಥೆಗಳು (2010), ಮಹಾಶ್ವೇತಾದೇವಿ, ಗಾಯಿತ್ರಿ ಚಕ್ರವರ್ತಿ ಸ್ಪೀವಾಕ್ (ಅನುವಾದ), ಸಿಗಲ್ ಬುಕ್ಸ್, ಕಲ್ಕತ್ತಾ.
2. ಮದರಂಗಿ ವೃತ್ತಾಂತ (2020), ಡಾ. ಎಚ್. ಎಲ್. ಪುಷ್ಪ, ಕಿ. ರಂ. ಪ್ರಕಾಶನ, ಬೆಂಗಳೂರು.
3. ಮಹಿಳೆ ಚರಿತ್ರೆ ಮತ್ತು ಪುರಾಣ, ಡಾ. ರಾಮಲಿಂಗಪ್ಪ ಟಿ ಬೇಗೂರು, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.